# ಗರ್ಭಧಾರಣೆಗೆ ತಡವೇಕೆ?

**ವಿವಾಹವಾಗಿ 5 ವರ್ಷಗಳನ್ನು ಪೂರೈಸಿದ್ದ ರಾಜು ಮತ್ತು ರೇಖಾ ದಂಪತಿಗಳು** ಸಂತಾನಫಲವಿಲ್ಲದ ಕಾರಣ ನಮ್ಮ ಕೇಂದ್ರಕ್ಕೆ ಭೇಟಿ ನೀಡಿದ್ದರು. ಎರಡು ವರ್ಷಗಳ ಹಿಂದೆಯೇ ಅವರು, ಸಾಕಷ್ಟು ಪ್ರಮಾಣದ ಯಶಸ್ವಿ ಸಾಧ್ಯತೆಗಳು ಇಲ್ಲದಿರುವ ಟಿಐ, ಐಯುಐ ಮುಂತಾದ ರೀತಿಯ ಪ್ರಕ್ರಿಯೆಗಳಿಗೆ ಸಮಯ ವ್ಯರ್ಥಗೊಳಿಸದೆ ಐವಿಎಫ್ ಚಿಕಿತ್ಸೆ ಪಡೆದುಕೊಳ್ಳಲು ನಿರ್ಧರಿಸಿದ್ದರು. ಹೀಗಾಗಿ ಅವರು, ದಿನನಿತ್ಯ ಸ್ಕ್ಯಾನ್ ಮಾಡಿಸಿಕೊಳ್ಳಲು ಮತ್ತು ಖಾಲಿ ಹೊಟ್ಟೆಯಲ್ಲಿ ಲ್ಯಾಬ್ ಟೆಸ್ಟ್ ಮಾಡಿಸಿಕೊಳ್ಳಲು ಓಡಾಡಲಿಕೆ ಅನುಕೂಲವಾಗಿರಲಿ ಎಂದು ತಮ್ಮ ಮನೆಯ ಹತ್ತಿರದಲಿಯೇ ಇರುವ ಒಂದು ಐವಿಎಫ್ ಸೆಂಟರ್‌ಗೆ ಭೇಟಿ ನೀಡಿದ್ದರು. ಆದರೆ ಆ ಸೆಂಟರ್‌ನಲ್ಲಿ ಎಗ್ ಪಿಕಪ್ ಹಾಗೂ ಎಂಬ್ರಿಯಾಲಜಿ ಘಟಕಗಳು ಇಲ್ಲವೆಂಬ ಸತ್ಯಾಂಶ ಇವರಿಗೆ ತಿಳಿದಿರಲಿಲ್ಲ. ಸದರಿ ಸೆಂಟರ್‌ನಲ್ಲಿ ಇವರಿಗೆ ಸ್ಟಿಮ್ಯುಲೇಶನ್ ನೀಡಲಾಯಿತಾದರೂ, ಆದರೆ ಎಗ್ ಪಿಕಪ್‌ಗಾಗಿ 5 ಕಿ.ಮೀ. ದೂರದಲ್ಲಿರುವ ಸ್ಥಳಕ್ಕೆ ಕರೆದೊಯ್ಯಲಾಯಿತು.



**ಪಿಕಪ್ ಪ್ರಕ್ರಿಯೆಯ ಸಂದರ್ಭದಲ್ಲಿ** ಇವರಿಗೆ ಸಾಕಷ್ಟು ಭರವಸೆಗಳನ್ನು ನೀಡಿದ್ದ ವೈದ್ಯರು ಕೂಡ ಹಾಜರಾಗಿರಲಿಲ್ಲ. ಪ್ರಕ್ರಿಯೆಯ ಬಳಿಕ ಒಂದು ಹೊಸ ವೈದ್ಯರ ತಂಡ ಇವರನ್ನು ಕೂರಿಸಿಕೊಂಡು ಸಮಾಲೋಚನೆ ನೀಡಿದ ಬಳಿಕ, ನಿಮ್ಮಲ್ಲಿ ಸಮರ್ಪಕವಾದ ಭ್ರೂಣಾಂಕುರ ಆಗುತ್ತಿಲ್ಲ ಮತ್ತು ಅದರ ಪ್ರಕ್ರಿಯೆ ಕೂಡ ಕಳಪೆಯಾಗಿದೆ ಎಂದು ತಿಳಿಸಿದ್ದರು. ದಂಪತಿಗಳಿಬ್ಬರೂ ಇನ್ನಿಲ್ಲದ ಆತಂಕಗಳಿಗೆ ಒಳಗಾಗಿದ್ದರು. ಹೀಗೆ ತಪ್ಪು ದಾರಿಗೆ ಎಳೆಯಲ್ಪಟ್ಟಿದ್ದ ದಂಪತಿಗಳು, ತಾವು ಮೊದಲು ಭೇಟಿಯಾಗಿದ್ದ ವೈದ್ಯರನ್ನು ಕೂಡ ಮರಳಿ ಭೇಟಿಯಾಗುವ ಧೈರ್ಯ ತೋರಲಿಲ್ಲ ಮತ್ತು ಮುಂದಿನ ಎರಡು ವರ್ಷಗಳ ಕಾಲ ಬೇರಾವುದೇ ಚಿಕಿತ್ಸೆಗೂ ಮುಂದಾಗಲಿಲ್ಲ. ಆದರೆ, ಅವರು ತಮ್ಮ ಸ್ನೇಹಿತರೊಬ್ಬರ ವಿಶ್ವಾಸಭರಿತ ಒತ್ತಾಯಪೂರ್ವಕ ಸಲಹೆಯ ಮೇರೆಗೆ ನಮ್ಮನ್ನು ಸಂಪರ್ಕಿಸಿದ್ದರು. ಅವರನ್ನು ಪರೀಕ್ಷೆಗೊಳಪಡಿಸಿದ ನಂತರ ಗಂಡನ ವೀರ್ಯಾಣುವಿನಲ್ಲಿ ಗರಿಷ್ಠ ಪ್ರಮಾಣದ ಡಿಎಫ್‌ಐ ಅಂಶವಿರುವುದು ಪತ್ತೆಯಾಯಿತು. ಸೂಕ್ತ ವೈದ್ಯಕೀಯ ಚಿಕಿತ್ಸೆ ಮತ್ತು ಆಹಾರ ಶೈಲಿ ಹಾಗೂ ಯೋಗ ಮತ್ತು ಪ್ರಾಣಾಯಾಮಗಳ ಮುಖಾಂತರ ಅವರ ವೀರ್ಯಾಣು ಪ್ರಮಾಣವನ್ನು ನಿಯಂತ್ರಿಸಲಾಯಿತು.



**ಪ್ರಶ್ನೆ ಪರಿಹಾರ**

ಇನ್ನೂ ಯಾಕೆ ಮಕ್ಕಳಾಗುತ್ತಿಲ್ಲ, ತೊಂದರೆ ಏನಿರಬಹುದು? ಇತ್ಯಾದಿ ನಿಮ್ಮ ಪ್ರಶ್ನೆಗಳಿಗೆ ಈ ಅಂಕಣದಲ್ಲಿ ತಜ್ಞ ವೈದ್ಯರು ಉತ್ತರಿಸುತ್ತಾರೆ. ನಿಮ್ಮ ಪ್ರಶ್ನೆಗಳನ್ನು ಈ ವಿಳಾಸಕ್ಕೆ ಕಳುಹಿಸಿ 210/ಎ, 50 ಅಡಿ ರಸ್ತೆ, 14ನೇ ಮುಖ್ಯ ರಸ್ತೆ, ಹನುಮಂತನಗರ, ಬೆಂಗಳೂರು-560 050
ದೂರವಾಣಿ/ಎಸ್‌ಎಂಎಸ್: 9886915556, 8884183338, 9148038971,
Toll Free : 18002008288

ಹೆಂಡತಿಗೆ ಉತ್ತಮ ಮಾನಸಿಕ ಚಿಕಿತ್ಸೆ ಹಾಗೂ ಯೋಗ ಉಪನ್ಯಾಸಗಳನ್ನು ನೀಡಲಾಯಿತು.

**ಬಳಿಕ ಸ್ಟಿಮ್ಯುಲೇಶನ್ ನೀಡಲಾಯಿತು,** ಗಂಡನಲ್ಲಿರುವ ಗರಿಷ್ಠ ಡಿಎಫ್‌ಐ ದೃಷ್ಟಿಯಿಂದಾಗಿ ಪಿಇಎಸ್ಎ ಮಾಡಲಾಯಿತು. ನಂತರ ಅತ್ಯುತ್ತಮ ಗರ್ಭಾಂಕುರಗಳು ಗೋಚರಿಸಿದವು ಮತ್ತು ಅವುಗಳನ್ನು ಶೀತಲೀಕರಗೊಳಿಸಿ, ಫ್ರೋಜನ್ ಎಂಬ್ರಿಯೊ ಟ್ರಾನ್ಸ್‌ಫರ್ ಮುಖಾಂತರ ಮುಂದಿನ ಅವಧಿಗೆ ವರ್ಗಾಯಿಸಲಾಯಿತು. ಮೊದಲ ಪ್ರಯತ್ನದಲ್ಲಿಯೇ ಅವರು ಗರ್ಭವತಿಯಾಗಿದ್ದರು.

**ಸಂತಾನ ಚಿಕಿತ್ಸೆಗಾಗಿ ಮತ್ತು ಸಂತಾನ** ಚಿಕಿತ್ಸೆಯ ಪ್ರಕ್ರಿಯೆಗಳನ್ನು ಪಡೆಯಲು ಸರಿಯಾದ ಸ್ಥಳದಲ್ಲಿ ಸೂಕ್ತವಾದ ವೈದ್ಯರನ್ನು ಕಂಡುಕೊಳ್ಳುವುದು ಬಹುಮುಖ್ಯವಾಗಿದೆ. ನಿಮ್ಮ ವೈದ್ಯರನ್ನು ಆಯ್ಕೆ ಮಾಡಿಕೊಳ್ಳುವಾಗ ಸಾಕಷ್ಟು ಪರಿಶೀಲನೆ ಮಾಡಿರಿ.



ಡಾ.ಆಶಾ.ಎಸ್.ವಿಜಯ್
ಗರ್ಭಗುಡಿ ಐವಿಎಫ್ ಸೆಂಟರ್
**ಪ್ರಶ್ನೆ ಪರಿಹಾರ**
**Ph: 9886915556, 080-26673777**